ರಮೇಶ್, ಹನುಮನಾಳು

ಕನಸುಗಳಲ್ಲಿ ನಿತ್ಯವೂ ಜೊತೆಗಿರ್ತೀಯಾ ಅಂತ ಕೇಳ್ತಾಳೆ. ಹಾಗಾದರೆ ನಿಜ ಜೀವನದಲ್ಲಿ?



ಅವಳದು ಡೇ ಶಿಫ್ಟ್, ನಿಮ್ಮದು ನೈಟ್ ಶಿಫ್ಟ್ ಆದ್ದರಿಂದ ಕನಸಲ್ಲಷ್ಟೇ ಗಟ್ಟಿಯಂತೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ಪ್ರತಿಯೊಂದು ನಿರ್ಧಾರಕ್ಕೂ ವಿವೇಚನೆ ಇರಲೇಬೇಕಾ ಗುರುಗಳೆ?

ಛೆ! ಹಾಗೇನಾದರೂ ಆಗಿಬಿಟ್ಟರೆ ಬ್ರೇಕಿಂಗ್ ನ್ಯೂಸ್‌ಗೆ ಸುದ್ದಿಗಳೇ ಸಿಗಲ್ಲ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ದೇಹದ ತೂಕಕ್ಕೂ ಮಾತಿನ ತೂಕಕ್ಕೂ ವ್ಯತ್ಯಾಸವೇನು?

ಇದು ಏರಬಾರದು, ಅದು ಇಳಿಯಬಾರದು.

ಗಂಜಾಂ ನಾಗರಾಜ್, ಮೈಸೂರು

ಹೆಣಕ್ಕೆ ಸಿಂಗಾರ ಯಾಕೆ?

ಕಡೆಯ ಬಾರಿ ಜೀವಕಳೆ ಬರಿಸುವ ಪ್ರಯತ್ನ.

ಬಿದರಹಳ್ಳಿ ನಾಗರಾಜ, ಹಿರೇಹಡಗಲಿ

ಕಾಸಿದ್ರೆ ಕೈಲಾಸ. ಇಲ್ದಿದ್ರೆ?



ಒಣವಾಸ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಮನೆಯಲ್ಲಿ ಜಾಗ ಕೊಟ್ಟರೆ ಮನಸ್ಸಿನಲ್ಲಿ ಜಾಗ ಕೇಳುತ್ತಾರಲ್ಲಾ?

ಎಚ್ಚರ! ಮನಸ್ಸನ್ನು ಖಾಲಿ ಮಾಡಿಸುವುದು ಬಲು ಕಷ್ಟ.

ಬಿ. ಚಂದ್ರೇಗೌಡ, ಬೆಂಗಳೂರು

ನಿಸರ್ಗನ್ಯಾಯ ಎಂದರೇನು?

ಕೋರ್ಟುಗಳು ಕೊಡಲು ಅಸಾಧ್ಯವಾದುದನ್ನು ಪ್ರಕೃತಿ ಜಾರಿಗೊಳಿಸಿಬಿಡುವ ಕ್ರಮ.

ಶಾಂತಾ ಗೌಡ, ಬೆಂಗಳೂರು

ಇಂದಿನ ಮಕ್ಕಳು ತಮಗೆಲ್ಲಾ ಗೊತ್ತು, ಯಾರೂ ಬುದ್ಧಿಮಾತು ಹೇಳಬೇಕಾಗಿಲ್ಲವೆಂಬಂತೆ ಆಡುವುದೇಕೆ?

ಈ ಪ್ರಶ್ನೆಯನ್ನು ಮೊದಲು ಪ್ರಹ್ಲಾದನ ಬಗ್ಗೆ ಹಿರಣ್ಯಕಶಿಪು ಕೇಳಿದನಂತೆ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ

ಮೊನ್ನೆ ಬೆಂಗಳೂರಲ್ಲಿ ಸನ್ಮಾನ ಮಾಡಿಸ್ಕೊಂಡ್ರಂತಲ್ಲಾ, ಏನ್ಕೊಟ್ರು ರಾಮ್?

ಸ್ಮರಣೀಯ ಕ್ಷಣಗಳನ್ನು.

ಅಶೋಕ್ ಆರ್. ಹಾಲಣ್ಣನವರ, ಲಕ್ಷ್ಮೇಶ್ವರ

ಆ ದೇವರು ಒಳ್ಳೆಯವರನ್ನು ಬೇಗ ಕರೆಸಿಕೊಳ್ಳುತ್ತಾನಂತೆ. ಹೌದಾ ಸರ್?

ಒಳ್ಳೆಯವರು ಯಾವಾಗ ಹೋದರೂ ನಮಗೆ ಬೇಗ ಹೋದರೆನಿಸುತ್ತದಷ್ಟೆ.

ಎಚ್. ಸಿದ್ಧಾರ್ಥ, ಈದು

ಪರಿಸ್ಥಿತಿಯ ಪರಿವರ್ತನೆಗೂ, ಮನಸ್ಥಿತಿಯ ಪರಿವರ್ತನೆಗೂ ವ್ಯತ್ಯಾಸವೇನು?

ಒಂದಕ್ಕೆ ಪಟ್ಟು ಹಿಡಿಯಬೇಕು; ಮತ್ತೊಂದಕ್ಕೆ ಪಟ್ಟು ಬಿಡಬೇಕು.

ಎಸ್.ಆರ್. ಪಾರ್ವತಿ, ಮೈಸೂರು

ರಷ್ಯಾ–ಯುಕ್ರೇನ್ ಯುದ್ಧ ಮೂರನೇ ಮಹಾಯುದ್ಧಕ್ಕೆ ನಾಂದಿ ಆಗಬಹುದೆ?

ಎಲ್ಲ ಯುದ್ಧಗಳೂ ಮಹಾ ಯುದ್ಧಗಳೇ; ಮ – ಮನೆ; ಹಾ – ಹಾಳು.

ಎಚ್. ಕರಿಯಪ್ಪ, ಗುಲ್ಬರ್ಗ

ನಿಮಗೆ ಕೇಳುಗರ ಮನ್ ಕೀ ಬಾತ್ ಕೇಳಿಸುತ್ತಾ?

ದಿಮಾಗ್ ಕೀ ಬತ್ತೀ ಸಹ ಕಾಣಿಸತ್ತೆ.

ಪಿ.ಜಯವಂತ ಪೈ, ಕುಂದಾಪುರ

ಚಟಕ್ಕೂ ಚಟ್ಟಕ್ಕೂ ವ್ಯತ್ಯಾಸವೇನು?

ಚಟ ಜರ್ನಿ; ಚಟ್ಟ ಡೆಸ್ಟಿನೇಷನ್.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

ಎಲ್ಲಾ ವಾಹನಗಳ ಟೈರ್‌ಗಳ ಬಣ್ಣವೇಕೆ ಕಪ್ಪಾಗಿರುತ್ತದೆ?

ಸವರ್ಣೀಯ ಪ್ರೀತಿ. ಕಪ್ಪುರಸ್ತೆ ಸವರ್ಣೀಯ ಟೈರನ್ನು ಜಾರದಂತೆ ಅಪ್ಪಿ ಹಿಡಿಯುವುದಂತೆ.

## ವಾರದ ಪ್ರಶ್ನೆ

ಪಿ.ಎನ್. ಶ್ರೀವತ್ಸ, ಬೆಂಗಳೂರು

ಮನುಷ್ಯ ದಿನಕ್ಕಿಷ್ಟು ಗಂಟೆ ನಿದ್ರಿಸಬೇಕೆನ್ನುವವರು; ಇಷ್ಟು ಗಂಟೆ ಕೆಲಸ ಮಾಡಬೇಕೆನ್ನುವುದಿಲ್ಲವಲ್ಲಾ?

ನಿದ್ರಿಸಿ ಎಂದರೆ ಕೂಡಲೆ ಒಪ್ಪುವವರು ಕೆಲಸವೆಂದಾಕ್ಷಣ ಬೋನಸ್, ಲೀವ್, ಸ್ಯಾಲರಿ ಕೇಳುವರಲ್ಲ!

ರತ್ನಜ, ಮೈಸೂರು

ನಿಮ್ಮ ಅಂಕಣದಲ್ಲಿ ನನ್ನ ನೂರಾರು ಪ್ರಶ್ನೆಗಳು ಪ್ರಕಟವಾಗಿರುವುದರಿಂದ ನಾನೊಬ್ಬ ಒಳ್ಳೆಯ ಸಾಹಿತಿಯಲ್ಲವೆ?

ಇರಬಹುದು. ಆದರೆ ಸಾವಿರಾರಕ್ಕೆ ಉತ್ತರಿಸಿರುವ ನಾನು ಇನ್ನೂ ಹಾಗಂದುಕೊಂಡಿಲ್ಲ.

ಎಂ.ಎ. ಕುಮಾರ್, ಬೆಂಗಳೂರು

ತಾತ ಅಜ್ಜಿಗೆ ತಾತ ಅಜ್ಜಿ ಎಂದು ಹೆಸರಿಟ್ಟವರು ಯಾರು?



ಮಗುವನ್ನು ತಾ, ತಾ ಎಂದ ಆತ, ಮಗುವೆಂದರೆ ಅಜ್ಜೆ ಎಂದ ಆಕೆಯನ್ನು ಮಗು ತಾತ ಅಜ್ಜಿ ಅಂದಿತಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು

ದೇವರನ್ನು ಕಂಡರೆ ಬಡವರಿಗೆ ಇರುವಷ್ಟು ಭಯ ಶ್ರೀಮಂತರಿಗೆ ಏಕೆ ಇರುವುದಿಲ್ಲ?

ಒಪ್ಪಿಸಲು ತಪ್ಪುಕಾಣಿಕೆ ಇರುತ್ತದಲ್ಲ.

ಬಾ.ರಂ. ಸುರೇಶ್, ಶಿವಮೊಗ್ಗ

ಬೇಟೆಯಾಡಲು ಹಾರಿಸುವ ಗುಂಡಿಗೂ, ಮನಸ್ಸಮಾಧಾನಕ್ಕಾಗಿ ಏರಿಸುವ ಗುಂಡಿಗೂ ಏನು ಸಾಮ್ಯ?

ಎರಡೂ ಕಡೆ ನಿಮ್ಮಿಂದ ಬಡಪ್ರಾಣಿಗಳಿಗೆ ಸಂಕಟ.

ರಾಜಶೇಖರ ಹಾದಿಮನಿ, ಧಾರವಾಡ

ಜನಪ್ರತಿನಿಧಿಗಳಿಗೆ ಎಲ್ಲ ಸವಲತ್ತುಗಳಿರುವಾಗ ಸಂಬಳ, ಪಿಂಚಣಿ ಏಕಿರಬೇಕು?

ಅವರ ಕಬಳಿಕೆ ಸಂಬಳ/ಪಿಂಚಣಿಯ ಯಾವ ಅನುಪಾತದಲ್ಲಿದೆ ಎಂದು ಹೋಲಿಸಲು.

■ ರಾಮ್